ಕಾರಟಗಿ ರೈಸ್ ಟೆಕ್ನಾಲಜಿ ಪಾರ್ಕ್- ಸ್ಥಾಪನೆಗೆ ಭೂ ಸ್ವಾಧೀನ ಪ್ರಕ್ರಿಯೆ

1024 (973) ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ (ಕನಕಗಿರಿ) : ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರಟಗಿ ವ್ಯಾಪ್ತಿಯಲ್ಲಿ ಸ್ಥಾಪಿಸಲಾಗುತ್ತಿರುವ ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪನೆ ಸಂಬಂಧಿಸಿದಂತೆ ಎಷ್ಟು ಎಕರೆ ಜಮೀನು ಭೂ-ಸ್ವಾಧೀನವಾಗಿದೆ ಹಾಗೂ ಇನ್ನೂ ಎಷ್ಟು ಎಕರೆ ಜಮೀನು ಭೂ ಸ್ವಾಧೀನವಾಗಬೇಕಾಗಿದೆ; ವಿಳಂಬಕ್ಕೆ ಕಾರಣಗಳೇನು?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು) :

ಅ) ರೈಸ್ ಟೆಕ್ನಾಲಜಿ ಪಾರ್ಕ್ ಸ್ಥಾಪಿಸಲು ಗಂಗಾವತಿ ತಾಲ್ಲೂಕಿನ ನವಲಿ ಮತ್ತು ಸೋಮನಾಳ ಗ್ರಾಮಗಳಲ್ಲಿರುವ ಈ ಕೆಳಕಂಡಂತೆ ಜಮೀನು ಪಡೆಯಲು ಗಂಗಾವತಿ ಸಮಿತಿಗೆ ಅನುಮತಿ ನೀಡಲಾಗಿದೆ.

ನವಲಿ ಗ್ರಾಮ :

ಸರ್ಕಾರಿ ಜಮೀನು – 222.36 ಎಕರೆ
ಖಾಸಗಿ ಜಮೀನು – 87.30 ಎಕರೆ

ಸೋಮನಾಳ ಗ್ರಾಮ :

ಸರ್ಕಾರಿ ಜಮೀನು – 107.21 ಎಕರೆ
ಖಾಸಗಿ ಜಮೀನು – 52.37 ಎಕರೆ

ಪ್ರಸ್ತುತ ನವಲಿ ಗ್ರಾಮದಲ್ಲಿನ ವಿವಿಧ ಸರ್ವೆ ನಂಬರ್‌ಗಳಲ್ಲಿನ 90.20 ಎಕರೆ ಸರ್ಕಾರಿ ಜಮೀನನ್ನು ಸರ್ಕಾರವು ಮಂಜೂರು ಮಾಡಿರುತ್ತದೆ. ಸೋಮನಾಳ ಗ್ರಾಮದ 107.21 ಎಕರೆ ಸರ್ಕಾರಿ ಜಮೀನು ಮಂಜೂರಾತಿ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. 140.27 ಎಕರೆ ಖಾಸಗಿ ಜಮೀನು ಭೂ-ಸ್ವಾಧೀನ ಪ್ರಕ್ರಿಯೆ ಮೂಲಕ ಪಡೆದುಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ.